ಸೇವೆ ಮತ್ತು ಆಧ್ಯಾತ್ಮಿಕತೆ

ಸಾಕಷ್ಟು ಅಪಮೌಲ್ಯ, ಅಪಾರ್ಥಕ್ಕೆ ಒಳಗಾದ ಶಬ್ದಗಳ ಲ್ಲೊಂದು 'ಸೇವೆ'. ಸಂಪೂರ್ಣವಾಗಿ ವಾಣಿಜ್ಯ, ವ್ಯವಹಾರ ಗಳಲ್ಲೇ ಮುಳುಗಿರುವ ಸಂಸ್ಥೆಗಳು ಇಷ್ಟು ವರ್ಷಗಳಿಂದ 'ಸೇವೆ' ಸಲ್ಲಿಸುತ್ತಿವೆ; ಸರ್ಕಾರಿ ನೌಕರರೂ 'ಸೇವೆ' ಸಲ್ಲಿಸುತ್ತಾರೆ. ಸ್ವಾರ್ಥ, ಡಾಂಭಿಕತನ, ಸುಳ್ಳುಗಳನ್ನೇ ಬಂಡವಾಳ ಮಾಡಿಕೊಂಡಿರುವ ಹಲವು ಮಂದಿ ರಾಜಕಾರಣಿಗಳೂ 'ಸೇವೆ' ಸಲ್ಲಿಸುವವರು. 'ಸೇವೆ' ಎಂದರೆ ಏನೆಂದೇ ಜನರಿಗೆ ಅರ್ಥವಾಗದ ಪರಿಸ್ಥಿತಿ ಇಂದಿನದು. ಸಮಾಜದಲ್ಲಿ 'ಅವನು ಸೇವೆ ಸಲ್ಲಿಸುತ್ತಿದ್ದಾನೆ' ಎಂದರೆ 'ಯಾವ ರೀತಿಯ ಸೇವೆ' ಎಂದು ಕೇಳುತ್ತಾರೆ. ಅಂದರೆ, 'ಯಾವ ಬಗೆಯ ನೌಕರಿ?' ಎಂದರ್ಥ. ಈ ಎಲ್ಲ ಬಳಕೆಯ ಮಾತು ಗಳನ್ನು ಬಿಟ್ಟು, ನಿಜವಾದ ಸೇವೆ ಎಂದರೇನು, ಅದರ ಅಗತ್ಯ ಎಷ್ಟರಮಟ್ಟಿಗಿದೆ — ಈ ಅಂಶಗಳನ್ನು ಈಗ ವಿಚಾರ ಮಾಡೋಣ.

ಸೇವಾ ಮನೋಭಾವದ ಮೂಲ

ಇತರರಿಗೆ ಸಹಾಯ ಮಾಡುವುದು, ಸಮಾಜದಲ್ಲಿ ಜನರಿ ಗಾಗಿ ಏನಾದರೂ ನೆರವಾಗುವ ಕಾರ್ಯವನ್ನು ಮಾಡುವುದು ಮಾನವ ಜೀವನದಲ್ಲಿ ಎಂದಿನಿಂದಲೂ ಇದ್ದಂತಹ ಒಂದು ಪದ್ಧತಿ. ಪ್ರಾಚೀನಕಾಲದಲ್ಲಿ ರಾಜಂದಿರು, ಧಾರ್ಮಿಕ ವ್ಯಕ್ತಿಗಳು ಅಥವಾ ಕೆಲವು ಮಂದಿ ಶ್ರೀಮಂತರು ಈ ರೀತಿಯ ಸೇವಾ ಕಾರ್ಯಗಳಲ್ಲಿ ತೊಡಗಿದ ಸಂಗತಿ ಚರಿತ್ರೆಯಿಂದ ತಿಳಿದು ಬರುತ್ತದೆ. ಜನರ ಹಿತದಿಂದಲೇ ತನ್ನ ರಾಜ್ಯ ಸುಭದ್ರವೂ, ಸುಭಿಕ್ಷವೂ ಆಗಿರುತ್ತದೆ ಎಂದು ರಾಜಂದಿರ ಮನೋಭಾವವಿದ್ದಿರ ಬಹುದು; ಅಥವಾ ಜನರನ್ನು ಶಾಂತಿ, ನೆಮ್ಮದಿಯಿಂದ ಇರು ವಂತೆ ನೋಡಿಕೊಳ್ಳುವುದೇ ರಾಜನ ಕರ್ತವ್ಯವೆಂಬ ಪ್ರಜ್ಞೆಯೂ ಇದ್ದಿರಬಹುದು. ಇದಕ್ಕೆ ವಿರುದ್ಧವಾಗಿ ಲೋಕಕಂಟಕರೂ, ಸ್ವಾರ್ಥಿಗಳೂ, ಪ್ರಜಾಪೀಡಕರೂ ಆಗಿದ್ದ ಅನೇಕ ಮಂದಿ ರಾಜಂ ದಿರ ಕಥೆಗಳನ್ನೂ ಕೇಳುತ್ತೇವೆ. ನಮ್ಮ ಪರಂಪರೆಯಲ್ಲಿ ರಾಜಂದಿರ ನೀತಿ, ಆದರ್ಶ ಯಾವುದೆಂದರೆ 'ಪ್ರಜೆಗಳನ್ನು ಮಕ್ಕಳ ಹಾಗೆ ನೋಡಿಕೊಳ್ಳುವುದು.' ಆದರೆ ಇದು 'ಸೇವೆ'ಯಲ್ಲ. ಅವನ ಕರ್ತವ್ಯವೇ ಇದು. ಹೀಗೆ ಮಾಡದಿದ್ದರೆ ಅವನು ಅಪರಾಧಿ. ಕರ್ತವ್ಯಲೋಪ ಮಾಡಿದಂತಾಗುತ್ತದೆ. ಬೇರೆ ಯಾವ ಕಾರಣವೂ ಇಲ್ಲದೆ, ಕೇವಲ ಇತರರ ಬಗ್ಗೆ ದಯೆ, ಅನುಕಂಪ, ಪ್ರೀತಿ ಇವುಗಳನ್ನು ಹೊಂದಿ ಅವರಿಗೆ ಒಳಿತನ್ನು ಮಾಡುವುದನ್ನು ನಿಜವಾದ ಸೇವೆಯೆನ್ನಬೇಕು. ಹಲವು ಸಂದರ್ಭಗಳಲ್ಲಿ ಯಾವುದೇ ಒಬ್ಬ ವ್ಯಕ್ತಿ — ಅವನು ರಾಜನಿರಲಿ, ಉದ್ಯಮಿಯಿರಲಿ, ಜನ ಸಾಮಾನ್ಯನಿರಲಿ — ಇತರರನ್ನು ನೋಡಿ ಅವರಿಗೆ ಸಹಾಯ ಮಾಡುವುದಕ್ಕೆ ಮುಂದಾಗುವುದನ್ನು ನೋಡುತ್ತೇವೆ; ಅವನಿಗೆ ಬೇರಾವ ಸ್ವಾರ್ಥದ ಉದ್ದೇಶವೂ ಇರುವುದಿಲ್ಲ. ಹೆಸರು, ಕೀರ್ತಿ ಗಳೂ ಅವನಿಗೆ ಬೇಕಾಗುವುದಿಲ್ಲ. ಹಲವು ಬಾರಿ ಅಂಥವರು ಗುಪ್ತವಾಗಿ ನಿಂತು, ಸಹಾಯ ಮಾಡಿ ಮರೆಯಾಗುತ್ತಾರೆ. ಇಂಥ ಸೇವೆಯೇ ನಿಜವಾದ ಸೇವೆ. ಬೇರಾವ ಸ್ವಾರ್ಥವೂ ಇಲ್ಲದೆ, 'ಇತರರು ಚೆನ್ನಾಗಿರಲಿ' ಎಂಬ ಕಾರಣದಿಂದ ಮಾತ್ರ ಒಳಿತನ್ನು ಮಾಡುವ ಕೆಲವು ಮಂದಿ ಎಲ್ಲ ಕಾಲದಲ್ಲೂ ಇದ್ದರು. ಈ ಬಗೆಯ ಬಯಕೆ, ಮನೋಭಾವ ಮಾನವಹೃದಯದ ಮಿಡಿತ; ಸೇವಾ ಮನೋಭಾವದ ಮೂಲ ಪ್ರವೃತ್ತಿ. ತನ್ನ ಹಾಗೆ ಇತರರೂ ಇರಲಿ; ಹಲವು ಬಾರಿ, ತಾನು ದುಃಖವನ್ನು ಅನುಭವಿಸಿದರೂ ಸರಿ, ಇತರರಿಗೆ ನೆಮ್ಮದಿಯುಂಟಾಗಲಿ ಎಂಬ ಭಾವನೆಯಿದು.

ವಿವಿಧ ಧರ್ಮಗಳಲ್ಲಿ ಸೇವಾ ಮನೋಭಾವ

ಭಗವಂತನ ಅಸ್ತಿತ್ವವನ್ನು ಪ್ರಧಾನ ಕೇಂದ್ರವಾಗಿಟ್ಟುಕೊಂಡು, ಅನಾದಿಕಾಲದಿಂದ ಮನುಷ್ಯನ ಜೀವನವನ್ನು ಪ್ರಭಾವಿಸಿರುವ ಹಲವು ಧರ್ಮಗಳು ಒಂದಲ್ಲ ಒಂದು ರೀತಿಯಲ್ಲಿ ಸೇವೆಯ ಆದರ್ಶವನ್ನು ಮೈಗೂಡಿಸಿಕೊಂಡಿವೆ.

ಹಿಂದೂಧರ್ಮದ ಮೂಲಗ್ರಂಥವಾದ ವೇದಗಳಲ್ಲಿ ಸರ್ವರಿಗೂ ಶಾಂತಿ, ಆನಂದ, ಸುಖ, ನೆಮ್ಮದಿಗಳನ್ನು ಬಯಸುವ ಹಲವಾರು ಮಂತ್ರಗಳು ಕಂಡುಬರುತ್ತವೆ. ಅಂತೆಯೇ ಆತ್ಮವು ಎಲ್ಲ ಜೀವಿಗಳ ಅಂತರಂಗದಲ್ಲಿರುವ ಚೈತನ್ಯವೆಂಬ ತತ್ತ್ವವು ಉಪನಿಷತ್ತುಗಳ ತಿರುಳಾಗಿದೆ. ವೇದ-ವೇದಾಂತಗಳ ಸಾರವಾಗಿರುವ ಭಗವದ್ಗೀತೆಯಲ್ಲಿ ಈ ಎರಡೂ ಭಾವಗಳು ಸಮನ್ವಯ ಹೊಂದಿ, ಭಾರತೀಯ ಆಧ್ಯಾತ್ಮಿಕ ಆದರ್ಶವನ್ನು ಅದು ಅದ್ಭುತವಾಗಿ ವ್ಯಕ್ತಪಡಿಸುತ್ತದೆ. ಅಲ್ಲಿನ ಕರ್ಮಯೋಗ ಅಥವಾ ನಿಷ್ಕಾಮ ಕರ್ಮ ಭಾವವು ಎಲ್ಲ ಬಗೆಯ ಸೇವಾಮನೋಭಾವಗಳಿಗೆ

ಆಧಾರವಾಗಿ ನಿಂತಿದೆ. **'ಸರ್ವಭೂತಹಿತೇ ರತಾಃ'** *(ಗೀತೆ, ೧೨.೪)* — ಎಂದರೆ ಎಲ್ಲ ಪ್ರಾಣಿಗಳ ಹಿತದಲ್ಲಿ ನಿರತನಾಗಿರುವವನು ನನ್ನನ್ನೇ ಹೊಂದುತ್ತಾನೆ ಎಂದು ಶ್ರೀಕೃಷ್ಣನು ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ.

ಬೌದ್ಧಧರ್ಮದ ಮೂಲಪುರುಷ ಬುದ್ಧನು ದಯೆ, ಅನುಕಂಪಗಳೇ ಮೈವೆತ್ತಂತೆ ಇದ್ದವನು. ಸಹಜವಾಗಿ ಅವನ ಅನುಯಾಯಿಗಳಲ್ಲೂ, ಅವನು ಸ್ಥಾಪಿಸಿದ ಸಂಘದಲ್ಲೂ ಸೇವಾಕಾರ್ಯ ಮೈಗೂಡಿಬಂತು. ಶಿಕ್ಷಣವೇ ಮುಂತಾದ ಕಾರ್ಯಗಳ ಮೂಲಕ ಸಮಾಜದಲ್ಲಿ ಸೇವಾಮನೋಭಾವವನ್ನು ಅವರು ಪಸರಿಸಿದರು. ಇನ್ನು ಜೈನಧರ್ಮದಲ್ಲಂತೂ 'ಅಹಿಂಸಾ ಪರಮೋ ಧರ್ಮ' ಎಂಬುದೇ ಚರಮಧ್ಯೇಯ; ಅದಕ್ಕನುಗುಣವಾಗಿ ಎಲ್ಲ ಪ್ರಾಣಿಗಳಲ್ಲಿ ದಯೆ, ಅನುಕಂಪೆ ಹೊಂದಿ ಅವುಗಳ ಹಿತವನ್ನು ಬಯಸುವುದೇ ಆದರ್ಶ. ಜೈನ ರಾಜರುಗಳು, ಮಂತ್ರಿಗಳು ಹಾಗೂ ಇತರರು ಅನೇಕ ಸೇವಾಕಾರ್ಯಗಳಲ್ಲಿ ನಿರತರಾಗಿದ್ದುದನ್ನು ಇತಿಹಾಸ ತಿಳಿಸುತ್ತದೆ.

ಒಂದೇ ಮೂಲದಿಂದ ಜನಿಸಿದ ಧರ್ಮಗಳಾದ ಕ್ರೈಸ್ತ, ಯೆಹೂದಿ ಹಾಗೂ ಇಸ್ಲಾಂ ಧರ್ಮಗಳಲ್ಲೂ ಸೇವಾಧರ್ಮ ಪ್ರಧಾನವಾಗಿ ಕಂಡುಬರುತ್ತದೆ. ಕ್ರೈಸ್ತ ಮಿಶನರಿಗಳಲ್ಲಿ ವೈದ್ಯಕೀಯ, ಶಿಕ್ಷಣ ಕ್ಷೇತ್ರಗಳಲ್ಲಿ ಹಲವು ಸೇವಾಕಾರ್ಯಗಳು ನಡೆಯುತ್ತಿವೆ. ಧರ್ಮಪ್ರಚಾರದೊಂದಿಗೆ ಜನಸೇವೆಯ ಆದರ್ಶವನ್ನೂ ಮೈಗೂಡಿಸಿಕೊಂಡು ನಿಸ್ವಾರ್ಥ ಬದುಕನ್ನು ನಡೆಸುವ ಧರ್ಮಗುರುಗಳಿಗೆ ಅಲ್ಲಿ ಉನ್ನತ ಸ್ಥಾನವನ್ನು ನೀಡಲಾಗಿದೆ.

ಸೇವಾಮನೋಭಾವ ಮತ್ತು ಅಹಂಕಾರ

ಜನರು ಇತರರಿಗೆ ಸಹಾಯ ಮಾಡುವುದು, ಸೇವಾಕಾರ್ಯಗಳನ್ನು ನಡೆಸುವುದು ಯಾವ ಉದ್ದೇಶದಿಂದ? ಕೆಲವೇ ಕೆಲವು ವ್ಯಕ್ತಿ ಅಥವಾ ಸಂಘ, ಸಂಸ್ಥೆಗಳನ್ನು ಬಿಟ್ಟರೆ ಬಹುತೇಕ ಎಲ್ಲರೂ ಸೇವೆ ಮಾಡುವುದು ತಮ್ಮ ಸ್ವಾರ್ಥವನ್ನು ಪೂರೈಸಿಕೊಳ್ಳಲು ಎಂಬುದೇ ಅತ್ಯಂತ ದುರದೃಷ್ಟಕರ ಸಂಗತಿ. ಸೇವೆ ಮಾಡುವುದರಿಂದ ಪುಣ್ಯ ಸಿಗುತ್ತದೆ; ಕೀರ್ತಿ ಬರುತ್ತದೆ; ಪ್ರಭಾವಶಾಲಿ ವ್ಯಕ್ತಿಗಳ ಗಮನ ಸೆಳೆದು ತಮ್ಮ ಕಾರ್ಯ ಸಾಧಿಸಲು ಅನುಕೂಲವಾಗುತ್ತದೆ — ಹೀಗೆ ಏನೇನೂ ಲೆಕ್ಕಾಚಾರಗಳಿರುತ್ತವೆ. ಇತರರಿಗೆ ಸಹಾಯ ಮಾಡಿದ ಬಳಿಕ, 'ನನ್ನ ಸಹಕಾರದಿಂದ ಅವರು ಬದುಕುವಂತಾಯಿತು. ಇಲ್ಲದಿದ್ದರೆ ಅವರ ಗತಿಯೇನು!' ಎಂದು ಜಂಭದಿಂದ ಎಲ್ಲೆಡೆ ಸಾರುತ್ತ ಹೋಗುತ್ತಾರೆ. ಇದು ಸರಿಯಾದ ಸೇವಾಮನೋಭಾವವಲ್ಲ. ಸ್ವಾರ್ಥ, ಅಹಂಕಾರ, ದರ್ಪಗಳಿಂದ ಕೂಡಿದ ಸೇವೆ ಕಲುಷಿತವಾದುದು, ಅಂಥ ಸೇವೆಯಿಂದ ಹೃದಯಶುದ್ಧಿಯುಂಟಾಗದು. ಗೀತೆಯಲ್ಲಿ ಹೇಳುವ 'ನಿಷ್ಕಾಮಕರ್ಮ' ಅಥವಾ ಫಲಾಪೇಕ್ಷೆಯಿಲ್ಲದೆ ಕರ್ಮವನ್ನು ಮಾಡುವುದು ಮಾತ್ರವೇ ನಿಜವಾದ ಸೇವೆ. ತನಗೆ ಯಾವುದೇ ಲಾಭವಿಲ್ಲದಿದ್ದರೂ ಹೆಸರು ಕೀರ್ತಿಗಳ ಬಯಕೆ ಇಲ್ಲದಿದ್ದರೂ, ಇತರರಿಗೆ ಸಹಾಯ ಮಾಡುವುದೇ ನಿಜವಾದ ಸೇವೆ. ಇತರರು ಸುಖವಾಗಿರಲಿ, ಸಂತೋಷವಾಗಿರಲಿ; ಅವರ ಸುಖದಿಂದಲೇ ತನ್ನ ಸುಖ — ಈ ಭಾವನೆ ಅತ್ಯಂತ ಪವಿತ್ರವಾದುದು.

ಶ್ರೀರಾಮಕೃಷ್ಣರು ತೋರಿಸಿಕೊಟ್ಟ ಹೊಸ ಆದರ್ಶ

ವೈಷ್ಣವ ಸಂಪ್ರದಾಯಗಳಲ್ಲಿ **'ನಾಮೇ ರುಚಿ, ಜೀವೇ ದಯಾ, ವೈಷ್ಣವ ಸೇವಾ'** (ಭಗವಂತನ ನಾಮ ಜಪದಲ್ಲಿ ಆಸಕ್ತಿ, ಜೀವಿಗಳಲ್ಲಿ ದಯೆ ಹಾಗೂ ಭಗವಂತನ ಭಕ್ತರನ್ನು ಪೂಜಿಸುವುದು) ಎಂಬ ಆದರ್ಶವಿದೆ. ಇದರಲ್ಲಿ ಜೀವಿಗಳ ಮೇಲೆ ದಯೆಯನ್ನು ಹೊಂದಿರುವುದು ಎಂಬ ವಿಚಾರವಾಗಿ ಚರ್ಚೆ ನಡೆದಾಗ ಶ್ರೀರಾಮಕೃಷ್ಣರು ಸಮಾಧಿಸ್ಥರಾಗಿ ಹೇಳಿದರು, ''ಜೀವಿಗಳ ಮೇಲೆ ದಯೆ ತೋರಿಸುವುದೆ? ಜೀವಿಗಳ ಮೇಲೆ ದಯೆ ತೋರಿಸುವೆಯಾ? ದಯೆ ತೋರಿಸುವುದಕ್ಕೆ ನೀನಾರು? ಇಲ್ಲ ಇಲ್ಲ, ಜೀವಿಗಳ ಮೇಲೆ ದಯೆ ಅಲ್ಲ — ಶಿವಜ್ಞಾನದಲ್ಲಿ ಜೀವಸೇವೆ!''

ಶ್ರೀರಾಮಕೃಷ್ಣರ ಈ ಮಾತಿನಲ್ಲಿ ಹೊಸ ಬೆಳಕನ್ನು ಕಂಡು, ಅದನ್ನು ಇತರರಿಗೆ ವಿವರಿಸಿ ಹೇಳಿದವರು ಸ್ವಾಮಿ ವಿವೇಕಾನಂದರು. 'ಜೀವಿಗಳ ಮೇಲೆ ದಯೆ ತೋರಿಸುವುದು' ಎಂದಾಗ, 'ತಾನು ಸುಸ್ಥಿತಿಯಲ್ಲಿರುವೆ, ನೀನು ಹೀನ ಸ್ಥಿತಿಯಲ್ಲಿರುವೆ; ನನ್ನ ದಯೆಯಿಂದ ನೀನು ಬದುಕುತ್ತಿರುವೆ' ಎಂಬ ಅಹಂಕಾರ ಭಾವ ಅಲ್ಲಿರುತ್ತದೆ. ಅದು ನಿಜವಾದ ಭಕ್ತನ ಸ್ವಭಾವವಾಗಲಾರದು. ಎಲ್ಲ ಜೀವಿಗಳಲ್ಲೂ ಭಗವಂತನ ಅಸ್ತಿತ್ವವನ್ನೂ ಕಾಣುವ ಭಕ್ತನು ಇತರರಿಗೆ ಸಹಾಯ ಮಾಡುವುದಲ್ಲ, ದಯೆ ತೋರಿಸುವುದಲ್ಲ; ಅವರಿಗೆ ಸೇವೆಯನ್ನಷ್ಟೇ ಮಾಡಲು ಸಾಧ್ಯ. ಈ ಮನೋಭಾವವನ್ನು ಸಮಾಧಿಯ ಉನ್ನತ ಸ್ಥಿತಿಯಲ್ಲಿದ್ದ ಶ್ರೀರಾಮಕೃಷ್ಣರು ಭಗವಂತನ ದಿವ್ಯವಾಣಿಯೋ ಎಂಬಂತೆ ಉಚ್ಚರಿಸಿದ್ದರು. ಸ್ವಾಮೀಜಿ ಅವರ ಮಾತಿನಲ್ಲಿಯೇ ಈ ವಿಚಾರವನ್ನು ಕೇಳೋಣ:

''ಇಂದು ಶ್ರೀರಾಮಕೃಷ್ಣರ ಮಾತಿನಲ್ಲಿ ಎಂಥ ಅದ್ಭುತ ಬೆಳಕನ್ನು ಕಂಡೆ! ಶುಷ್ಕ, ಕಠೋರ, ನಿಷ್ಪ್ರೇಮವೆಂದು ಪ್ರಸಿದ್ಧವಾಗಿರುವ ವೇದಾಂತ ಜ್ಞಾನವನ್ನು ಭಕ್ತಿಯೊಡನೆ ಒಂದುಗೂಡಿಸಿ ಎಂಥ ಸರಳವೂ ಮಧುರವೂ ಆದ ವ್ಯಾಖ್ಯಾನವನ್ನು ನೀಡಿದರು! ಅದ್ವೈತ ಜ್ಞಾನವನ್ನು ಪಡೆದರೆ ಸಂಸಾರ ಮತ್ತು ಪ್ರಪಂಚದ ಸಂಗವನ್ನು ತ್ಯಜಿಸಿ ಕಾಡಿಗೆ ಹೋಗಬೇಕು ಮತ್ತು ಭಕ್ತಿ, ಪ್ರೀತಿ ಮುಂತಾದ ಕೋಮಲ ಭಾವಗಳನ್ನು ಹೃದಯದಿಂದ ಸಂಪೂರ್ಣ ಕಿತ್ತೆಸೆಯಬೇಕು — ಈ ಮಾತನ್ನು ಇಷ್ಟು ಕಾಲವೂ ಕೇಳುತ್ತಾ ಬಂದಿದ್ದೇನೆ. ಇದರ ಪರಿಣಾಮವಾಗಿ ಜಗತ್ತು ಮತ್ತು ಅದರಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗಳನ್ನೂ ಧರ್ಮಮಾರ್ಗಕ್ಕಿರುವ ಅಡಚಣೆಗಳೆಂದು ಪರಿಗಣಿಸಿ ಅವರ ಬಗ್ಗೆ ತಿರಸ್ಕಾರ ಭಾವನೆ ಉಂಟಾಗಿ, ಅದೇ ಸಾಧಕನಿಗೆ ಹಾನಿಯನ್ನುಂಟು ಮಾಡುತ್ತದೆ. ಇಂದು ಶ್ರೀರಾಮಕೃಷ್ಣರ ಮಾತಿನಿಂದ ತಿಳಿದು ಬರುವುದೇನೆಂದರೆ ವನದ ವೇದಾಂತವನ್ನು ಮನೆಗೆ ತರಬೇಕು. ಸಂಸಾರದ ಪ್ರತಿಯೊಂದು ಕೆಲಸದಲ್ಲಿಯೂ ಅದನ್ನು ಅವಲಂಬಿಸುವಂತೆ ಮಾಡಬೇಕು. ಮಾನವನು ಏನೇನು ಮಾಡುತ್ತಿರುವನೋ ಅದನ್ನೇ ತಾನು ಮಾಡಲಿ, ಅದರಲ್ಲಿ ಹಾನಿಯಿಲ್ಲ. ಆದರೆ ಅವನು ತನ್ನ ಹೃದಯಾಂತರಾಳದಲ್ಲಿ ಈ ವಿಶ್ವಾಸವನ್ನು ಇಟ್ಟುಕೊಂಡಿರಬೇಕು: ಈಶ್ವರನೇ

ಜೀವ, ಜಗತ್ತಿನ ರೂಪದಲ್ಲಿ ತನ್ನ ಮುಂದೆ ಪ್ರಕಾಶಿಸುತ್ತಿರುವನು, ಜೀವನದ ಪ್ರತಿ ಮುಹೂರ್ತದಲ್ಲಿಯೂ ಅವನು ಯಾರನ್ನು ಸಂಪರ್ಕಿಸುತ್ತಾನೊ, ಯಾರನ್ನು ಪ್ರೀತಿಸುತ್ತಾನೊ, ಯಾರಿಗೆ ಶ್ರದ್ಧೆ, ದಯೆ, ಗೌರವ ತೋರಿಸುತ್ತಾನೊ, ಅವರೆಲ್ಲರೂ ಭಗವಂತನ ಅಂಶ. ಪ್ರಪಂಚದಲ್ಲಿರುವ ಎಲ್ಲಾ ವ್ಯಕ್ತಿಗಳನ್ನೂ ಈ ರೀತಿ ಶಿವಜ್ಞಾನದಿಂದ ನೋಡಲು ಸಾಧ್ಯವಾದರೆ ತನ್ನನ್ನು ಒಬ್ಬ ದೊಡ್ಡ ವ್ಯಕ್ತಿಯೆಂದು ಪರಿಗಣಿಸುತ್ತಾ ಅವರ ವಿಷಯದಲ್ಲಿ ರಾಗ, ದ್ವೇಷ, ಜಂಭ ಅಥವಾ ದಯೆ ಇವುಗಳನ್ನು ವ್ಯಕ್ತಪಡಿಸಲು ಅವಕಾಶವೆಲ್ಲಿ? ಈ ರೀತಿ ಶಿವಜ್ಞಾನದಿಂದ ಜೀವಿಗಳ ಸೇವೆ ಮಾಡುತ್ತಾ ಚಿತ್ತಶುದ್ಧಿ ಉಂಟಾಗುತ್ತದೆ. ಸ್ವಲ್ಪಕಾಲದಲ್ಲಿಯೇ ತನ್ನನ್ನು ಚಿದಾನಂದಮಯ ಭಗವಂತನ ಅಂಶ, ಶುದ್ಧ, ಬುದ್ಧ ಮುಕ್ತಸ್ವಭಾವದವನು ಎಂದು ಅರಿಯಲು ಸಾಧ್ಯವಾಗುತ್ತದೆ.

''ಶ್ರೀರಾಮಕೃಷ್ಣರ ಈ ಮಾತಿನಿಂದ ಭಕ್ತಿಮಾರ್ಗದಲ್ಲಿಯೂ ವಿಶೇಷ ಬೆಳಕನ್ನು ಕಂಡಂತಾಯಿತು. ಸರ್ವಭೂತಗಳಲ್ಲಿಯೂ ಭಗವಂತನನ್ನು ಎಲ್ಲಿಯವರೆಗೆ ಕಾಣಲಾಗುವುದಿಲ್ಲವೋ ಅಲ್ಲಿಯವರೆಗೆ ಯಥಾರ್ಥಭಕ್ತಿ ಅಥವಾ ಪರಾಭಕ್ತಿಯನ್ನು ಪಡೆಯುವುದು ಸಾಧಕನಿಗೆ ಬಹುದೂರದ ಮಾತು. ಶಿವ ಅಥವಾ ನಾರಾಯಣ ಬುದ್ಧಿಯಿಂದ ಜೀವಿಗಳ ಸೇವೆ ಮಾಡಿದರೆ ಎಲ್ಲರ ಒಳಗೂ ಭಗವಂತನನ್ನು ಕಾಣುವುದರ ಮೂಲಕ ಸಾಧಕನು ಯಥಾರ್ಥ ಭಕ್ತಿಯನ್ನು ಪಡೆದು ಸ್ವಲ್ಪ ಕಾಲದಲ್ಲಿಯೇ ಕೃತಾರ್ಥನಾಗುತ್ತಾನೆ. ಕರ್ಮ ಅಥವಾ ರಾಜಯೋಗವನ್ನು ಯಾರು ಅನುಸರಿಸುತ್ತಿರುವರೋ ಆ ಸಾಧಕರೂ ಕೂಡ ಈ ಮಾತಿನಲ್ಲಿ ವಿಶೇಷ ಬೆಳಕನ್ನು ಪಡೆಯುತ್ತಾರೆ. ಏಕೆಂದರೆ ದೇಹಧಾರಿಯಾದವನು ಕರ್ಮ ಮಾಡದೆ ಒಂದು ಕ್ಷಣವೂ ಇರಲಾರ. ಹಾಗಿರುವಾಗ ಶಿವಜ್ಞಾನದಲ್ಲಿ ಜೀವಸೇವೆಯ ರೂಪದ ಕರ್ಮಾನುಷ್ಠಾನ ಮಾಡುವುದು ಕರ್ತವ್ಯ ಮತ್ತು ಅವನು ಹೀಗೆ ಮಾಡುವುದರಿಂದಲೇ ಬೇಗನೆ ಗುರಿಯನ್ನು ಮುಟ್ಟುತ್ತಾನೆ. ಏನೇ ಆಗಲಿ, ಭಗವಂತನು ನನಗೆ ಅವಕಾಶ ಕೊಟ್ಟಿದ್ದೇ ಆದರೆ ಇಂದು ನಾನು ಏನು ಕೇಳಿದೆನೋ ಈ ಅದ್ಭುತ ಸತ್ಯವನ್ನು ಪ್ರಪಂಚದ ಎಲ್ಲೆಡೆ ಪ್ರಚಾರ ಮಾಡುತ್ತೇನೆ. ಪಂಡಿತ, ಮೂರ್ಖ, ಶ್ರೀಮಂತ, ದರಿದ್ರ, ಬ್ರಾಹ್ಮಣ, ಚಂಡಾಲ ಎಲ್ಲರೂ ಇದನ್ನು ಕೇಳಿ ಮುಗ್ಧರಾಗುವಂತೆ ಮಾಡುತ್ತೇನೆ.'' *(ಶ್ರೀರಾಮಕೃಷ್ಣ ಲೀಲಾಪ್ರಸಂಗ, ಭಾಗ ೨, ಪು. ೩೮೦-೮೧)*

ಸೇವಾಕಾರ್ಯಗಳಿಗೆ ಸ್ವಾಮೀಜಿ ಕೊಟ್ಟ ರೂಪುರೇಷೆ

ಶ್ರೀರಾಮಕೃಷ್ಣರ ಅತ್ಯಂತ ಗಾಢ ಆಧ್ಯಾತ್ಮಿಕ ಅನುಭವದ ಹಿನ್ನೆಲೆಯಿಂದ ಈ ದಿವ್ಯ ಆದರ್ಶವನ್ನು ಕರ್ಮಯೋಗ, ತ್ಯಾಗ-ಸೇವೆ ಎಂಬ ಧ್ಯೇಯಗಳ ಮೂಲಕ ಜಗತ್ತಿಗೆ ಸಾರಿ, ಹೊಸ ಆಧ್ಯಾತ್ಮಿಕ ಮಾರ್ಗವನ್ನು ತೋರಿಸಿಕೊಟ್ಟರು ಸ್ವಾಮಿ ವಿವೇಕಾನಂದರು. ಆಗಿನ ಭಾರತದ ಪರಿಸ್ಥಿತಿ; ಪರಕೀಯರ ದಾಸ್ಯದಿಂದ ಕಂಗೆಟ್ಟಿದ್ದ ದೇಶದ ಸ್ಥಿತಿಗತಿ ಬಡತನ, ಅನಕ್ಷರತೆ, ಅಜ್ಞಾನ ಮುಂತಾದ ಸಾಮಾಜಿಕ ದುಃಸ್ಥಿತಿ — ಇವುಗಳಿಗೆಲ್ಲ ಈ ಹೊಸ ತ್ಯಾಗ-ಸೇವೆಯ ಆದರ್ಶ ಅತ್ಯಂತ ಸೂಕ್ತವಾದ ಆಧ್ಯಾತ್ಮಿಕ ಮಾರ್ಗವೆನಿಸಿತು. ಈ ಕಾರಣದಿಂದಲೇ ಅವರು ಕರ್ಮಯೋಗದ ಮಹತ್ವವನ್ನು ಎತ್ತಿಹಿಡಿದರು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಉಪದೇಶಿಸಿದ್ದ ಕರ್ಮಯೋಗದ ಆದರ್ಶವು ಅತ್ಯಂತ ವಿಶಾಲವೂ ಆಧ್ಯಾತ್ಮಿಕ ಹಾಗೂ ಲೌಕಿಕ ಬದುಕನ್ನು ಒಂದುಗೂಡಿಸುವಂತಹದೂ ಆಗಿತ್ತು. ಆದರೆ ಕಾಲಾಂತರದಲ್ಲಿ ಈ ಆದರ್ಶವನ್ನಿಟ್ಟುಕೊಂಡು ಕರ್ಮಯೋಗದ ಮೂಲಕ ಆಧ್ಯಾತ್ಮಿಕ ಸಾಧನೆ ಮಾಡುವ ಮಾರ್ಗವು ಭಾರತದಲ್ಲಿ ಕಳೆದೇಹೋಗಿತ್ತು ಎನ್ನಬೇಕು. ಗೀತೆಯ ಮೇಲೆ ಬರೆದ ಭಾಷ್ಯಗಳಲ್ಲಿ ಕರ್ಮವೆಂದರೆ ಯಜ್ಞಕ್ರಿಯೆ ಎಂಬ ಅರ್ಥವನ್ನು ನೀಡುವ ಕ್ರಮವನ್ನೂ ಕಾಣುತ್ತೇವೆ. ಈ ಎಲ್ಲ ಕಾರಣಗಳಿಂದ, 'ಕರ್ಮಯೋಗ'ವೆಂದರೆ 'ನಿಸ್ವಾರ್ಥವಾಗಿ ಮಾಡುವ ಸೇವೆ' ಎಂಬ ಅರ್ಥ ನಮ್ಮ ಪರಂಪರೆಯಲ್ಲಿ ಸ್ಪಷ್ಟವಾಗಿ ಮೂಡಿ ಬಂದಿರಲಿಲ್ಲ. ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಅನುಭವದ ಆಳದಿಂದ ಈ ಅರ್ಥವನ್ನು ಹೊಸದಾಗಿ ಬೆಳಗಿಸಿದರು; ಸ್ವಾಮೀಜಿ ಅದನ್ನು ಎಲ್ಲರಿಗೂ ಅರ್ಥವಾಗುವಂತೆ ವಿವರಿಸಿ, ಈ ದಿವ್ಯ ಆದರ್ಶವು ಕಾರ್ಯಗತವಾಗುವಂತೆ ಮಾಡಿದರು. ಅವರು ತಮ್ಮ ಸಹೋದರ ಸಂನ್ಯಾಸಿಗಳೊಂದಿಗೆ ಹತ್ತು ಹಲವು ಸೇವಾಕಾರ್ಯಗಳನ್ನು ಆರಂಭಿಸಿದರು. ತಮ್ಮ ಶಿಷ್ಯಂದಿರನ್ನೂ, ಭಾರತದ ಯುವಕ-ಯುವತಿಯರನ್ನೂ ಅನೇಕ ಬಗೆಯ ಸೇವಾಕಾರ್ಯಗಳಲ್ಲಿ ತೊಡಗಿಸಿ, ಈ ಮೂಲಕ ದೇಶದೆಲ್ಲೆಡೆ ನಿಸ್ವಾರ್ಥ ಸೇವೆಯ ಹೊಸ ಅಲೆ ವ್ಯಾಪಿಸುವಂತೆ ಮಾಡಿದರು.

ಸ್ವಾಮಿ ವಿವೇಕಾನಂದರ 'ಕರ್ಮಯೋಗ' ಗ್ರಂಥವು ಭಗವದ್ಗೀತೆಯ ನಂತರ ಕರ್ಮಯೋಗದ ಆದರ್ಶವನ್ನು ಎತ್ತಿಹಿಡಿಯುವ ಗ್ರಂಥವಾಗಿದೆ. ಗೀತೆಯಲ್ಲಿ ಕಂಡುಬರುವ ನಿಷ್ಕಾಮ ಕರ್ಮದ ಆದರ್ಶದೊಂದಿಗೆ ಶ್ರೀರಾಮಕೃಷ್ಣರ ಹಾಗೂ ವೇದಾಂತ ತತ್ತ್ವಗಳ ಆದರ್ಶವನ್ನು ಬೆಸೆದು 'ಕರ್ಮಯೋಗ'ವೆಂಬುದು ಒಂದು ಶ್ರೇಷ್ಠ ಆಧ್ಯಾತ್ಮಿಕ ಸಾಧನೆಯೇ ಆಗಿದೆ ಎಂದು ನಿರೂಪಿಸಿದರು ಸ್ವಾಮಿ ವಿವೇಕಾನಂದರು. ಅವರು ಹಾಕಿಕೊಟ್ಟ ಈ ರೂಪರೇಷೆಯನ್ನು ಆಧರಿಸಿ ಇಂದು ಭಾರತ ಹಾಗೂ ಇತರ ದೇಶಗಳಲ್ಲಿನ ಹತ್ತು ಹಲವು ಸಂಘಸಂಸ್ಥೆಗಳು ಹಾಗೂ ಅನೇಕ ವ್ಯಕ್ತಿಗಳು ಬಗೆಬಗೆಯ ಸೇವಾಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ. ಜಗತ್ತಿಗೆ ನಿಸ್ವಾರ್ಥಸೇವೆಯ ಆಧ್ಯಾತ್ಮಿಕ ಮೌಲ್ಯವನ್ನು ವಿವರಿಸಿ, ಅದರ ವ್ಯಾಪ್ತಿಯನ್ನು ವಿಸ್ತರಿಸಿ ಉನ್ನತ ನೆಲೆಗೇರಿಸಿದ ಕೀರ್ತಿ ಸ್ವಾಮಿ ವಿವೇಕಾನಂದರದು. ಭಾರತದ ಪ್ರಾಚೀನ ಪರಂಪರೆಯಲ್ಲಿ ಮರೆಯಾಗಿದ್ದ ಶ್ರೇಷ್ಠ ಹಾಗೂ ದಿವ್ಯ ರತ್ನದ ಗಣಿಯನ್ನು ಶೋಧಿಸಿ ತೆಗೆದು, ಹೊಸ ಹೊಳಹನ್ನು ನೀಡಿ, ಪ್ರಪಂಚಕ್ಕೆ ಅಮೃತವನ್ನೇ ಉಣಿಸಿದ ಶ್ರೀರಾಮಕೃಷ್ಣ-ವಿವೇಕಾನಂದರ ಈ ಮಹತ್ಕಾರ್ಯವನ್ನು ಮನುಕುಲವು ಎಂದೆಂದಿಗೂ ಮರೆಯಲಾಗದು. ✸

ಜೂನ್ ತಿಂಗಳ ಕಾರ್ಯಕ್ರಮಗಳು

೧೩. ಗುರುವಾರ — ಏಕಾದಶಿ
೨೮ ಶುಕ್ರವಾರ — ಏಕಾದಶಿ